# ಕುವೆಂಪು ಮತ್ತು ಪೂರ್ಣಚಂದ್ರ ತೇಜಸ್ವಿ ಅವರ ಸಾಹಿತ್ಯದಲ್ಲಿ ರೈತ

ಡಿ.ಪುರುಷೋತ್ತಮ
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಸಿದ್ಧಾರ್ಥನಗರ, ಮೈಸೂರು.

ವರ್ಗ ಮತ್ತು ವರ್ಣಗಳ ನಡುವೆ ಅಭೇದವಾಗಿ ಉಳಿದಿರುವ ಮಹಾಶಕ್ತಿ ಎಂದರೆ ರೈತ ಪರಿವಾರದವರು. ಹಸಿದ ಹೊಟ್ಟೆಗೆ ಅನ್ನ ನೀಡುವ ಮಹಾಶಕ್ತಿ ರೈತನಾಗಿದ್ದಾನೆ. ಅಸಂಘಟನೆ, ಮೌಢ್ಯ, ಶಿಕ್ಷಣದ ಕೊರತೆ ಇವುಗಳಿಂದ ಬಳಲುತ್ತಿರುವ ರೈತನ ಕುರಿತು ಕುವೆಂಪು ಮತ್ತು ತೇಜಸ್ವಿ ಇಬ್ಬರೂ ಸೂಕ್ಷ್ಮವಾಗಿ ಅವನ ವೇದನೆಯನ್ನು ಗ್ರಹಿಸಿ ಅಭಿವ್ಯಕ್ತಿಸಿದ್ದಾರೆ. ಕೃಷಿ ಕುಟುಂಬದ ಕುಡಿಯಾಗಿ ಕುವೆಂಪು ಅವರು, ಕೃಷಿಕನಾಗೇ ಬದುಕಿದ ತೇಜಸ್ವಿ ಇಬ್ಬರೂ ತಮ್ಮ ರೈತ ವರ್ಗದ ಸಂಕಟವನ್ನು ಅವರ ಬರಹಗಳಲ್ಲಿ ಹರಳುಗಟಿಸಿದ್ದಾರೆ. ಕುವೆಂಪು ಅವರ ಕಥೆ, ಕಾದಂಬರಿ, ನಾಟಕ, ಕಾವ್ಯ ಇವುಗಳಲ್ಲಿ ರೈತ ಪಾತ್ರ ಮತ್ತು ರೈತ ಬದುಕು ಅಭಿವ್ಯಕ್ತವಾಗಿದೆ. ಸುಮಾರು 100 ವರ್ಷಗಳ ಹಿಂದಿನ ರೈತನ ಸಮಸ್ಯೆಗಳಿಂದ ಹಿಡಿದು ಇಂದಿನ ರೈತನ ಸಮಸ್ಯೆಗಳ ತನಕ ಅನೇಕ ವಿಚಾರಗಳನ್ನು ಕುವೆಂಪು ಮತ್ತು ತೇಜಸ್ವಿ ಬರಹಗಳಲ್ಲಿ ಕಾಣಬಹುದು.

1930ರಲ್ಲಿ ಪ್ರಕಟವಾದ 'ಕೊಳಲು' ಕವನ ಸಂಕಲನದಲ್ಲಿ 'ನೇಗಿಲಯೋಗಿ' ಎಂಬ ಕವನವನ್ನು ರಚಿಸಿ ಕುವೆಂಪು ರೈತನನ್ನು ನೇಗಿಲ ಯೋಗಿಯಾಗಿ ಕಾಣುತ್ತಾರೆ. ಜಗದ ತುಂಬ ಇರುವ ಭೋಗಿಗಳಿಗೆ ಅನ್ನ ನೀಡುವ ಯೋಗಿ ರೈತನಾಗಿದ್ದಾನೆ. ರೈತವರ್ಗದ ಬದುಕು ಮತ್ತು ಅವರ ವೃತ್ತಿ ಕರ್ಮವನ್ನು ನಡೆಸುಕೊಂಡು ಬಂದಿರುವ ಪರಿಯನ್ನು ಈ ಕವನದಲ್ಲಿ ಕಾಣಬಹುದು. ಪ್ರಭುತ್ವ ಮತ್ತು ರೈತನ ಬವಣೆ ಎರಡು ಭಿನ್ನವಾದ ನೆಲೆಗಳು ಎದುರಾದರೂ ಅದರಲ್ಲಿ ಶಾಶ್ವತವಾಗಿ ಉಳಿಯುವ ಶಕ್ತಿ ರೈತನಾಗಿದ್ದಾನೆ. ಲೋಕದ ಮತ್ತು ಕಾಲದ ಎರಡು ಪರಿವರ್ತನೆಗಳಲ್ಲಿ ತನ್ನ ಸ್ಥಾಯಿಯಾದ ಮನೋಪ್ರವೃತ್ತಿ ಮತ್ತು ವೃತ್ತಿಯನ್ನು ರೈತ ಬದಲಿಸಿಕೊಳ್ಳದೆ. ವೃತ್ತಿ ನಿಷ್ಠನಾಗೇ ಉಳಿಯುವನು. 'ನೇಗಿಲ ಮೇಲೆ ನಿಂತಿದೆ ಧರ್ಮ' ಎಂಬ ಸಾಲಿನಲ್ಲಿ ಅನಿವಾರ್ಯವಾದ ಸ್ಥಿತಿ ಮತ್ತು ಅಗತ್ಯವಾದ ಎರಡು ಎಲ್ಲೆಗಳು ಸೇರುವ ಪರಿಯಂತೂ ಕವಿ ಕಂಡು ಕೊಂಡಿದ್ದಾರೆ. ಹಸಿದವನಿಗೆ ಅನ್ನ ನೀಡುವುದೇ ಶ್ರೇಷ್ಠವಾದ ಧರ್ಮ. ಹಸಿವು ಕಳೆದ ಮೇಲೆ ಉಳಿಕೆಯ ಆಚರಣೆಗಳ ಅಗತ್ಯ ಲೋಕಕ್ಕೆ ಇರುವುದು. ಇದನ್ನೇ ಕನಕದಾಸರು ಹೇಳುವುದು. ಎಲ್ಲರೂ ಮಾಡುವುದು ಹೊಟ್ಟೆಗಾಗಿ ಮೊದಲು. ಆನಂತರ ಬಟ್ಟೆಗಾಗಿ. ನಂತರ ಲೋಕ ವ್ಯವಹಾರಗಳು. ಮನುಷ್ಯನ ಬದುಕಿನ ಮುಖ್ಯವಾದ ಕ್ರಿಯೆ ಅಡಗಿರುವುದೇ ಹಸಿವು ಮತ್ತು ಆಹಾರದ ಜೊತೆ ಜೊತೆಗೆ. ಇವುಗಳನ್ನು ಪೂರೈಕೆ ಮಾಡುವಲ್ಲಿ ರೈತನ ಸೇವಾ ಮನೋಧರ್ಮವು ನಿಷ್ಕಾಮ ಕರ್ಮದಿಂದ ಕೂಡಿದ್ದು. 'ಫಲವನು ಬಯಸದ ಸೇವೆಯೇ ಪೂಜೆಯು! ಕರ್ಮವೆ ಇಹಪರ

ಸಾಧನವು' ಆಗಿ ರೈತನು ಹಿಂದಿನಿಂದ ಇಲ್ಲಿಯತನಕವೂ, ಇನ್ನೂ ಮುಂದೆಯೂ ಲೋಕಕ್ಕೆ ಅನ್ನ ನೀಡುವ ಅನ್ನದಾತನಾಗಿದ್ದಾನೆ.

ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವುದೆ ಇಲ್ಲ.........

ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು.
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ.
ನೇಗಿಲಕುಳದೊಳಗಡಗಿದೆ ಕರ್ಮ;
ನೇಗಿಲ ಮೇಲೆಯೆ ನಿಂತಿದೆ ಧರ್ಮ. -'ನೇಗಿಲಯೋಗಿ'

ಪ್ರಭುತ್ವ ಕೂಡ ರೈತನನ್ನು ಕಡೆಗಣಿಸುವಂತಿಲ್ಲ. ಏಕೆಂದರೆ ಮನುಷ್ಯ ಲೋಕದ ಮೊದಲ ಅಗತ್ಯವಾದ ಹಸಿವನ್ನು ತಣಿಸುವ ರೈತನ ಕುರಿತು ಸುಗ್ಗಿಹಾಡು ಕವನದಲ್ಲಿ ಕುವೆಂಪು ಅವರು ಹೇಳುವಂತೆ

ನಮ್ಮ ಕೈಗಳೆ ಭೂಮಿಗಿಳಿದಿಹ ಕಲ್ಪವೃಕ್ಷಗಳು,
ನಮ್ಮ ಕಾಲುಗಳೆಳೆಗೆ ಬಂದಿಹ ಕಾಮಧೇನುಗಳು;
ಕೆಸರುಧೂಳುಗಳಿಂದ ಕೆದರಿದ
ನಮ್ಮ ತಲೆ ವೈಕುಂಠವು! -'ಸುಗ್ಗಿಹಾಡು'

ವಾಸ್ತವ ಮತ್ತು ಪುರಾಣಗಳ ಎರಡು ನೆಲೆಯ ಅರ್ಥ ಗೌರವಗಳಿಗೂ ನಿಜಕ್ಕೂ ಪಾತ್ರನಾಗುವ ಏಕೈಕ ವ್ಯಕ್ತಿ 'ರೈತ'. ಅರ್ಥಿಕ ಸ್ಥಿತಿ ಬದಲಾದರೂ, ನಾಗರಿಕತೆ, ನಗರೀಕರಣ, ಯಂತ್ರನಾಗರಿಕತೆ, ಆಧುನಿಕತೆ ಬಂದರೂ ರೈತನ ಬದುಕು ಮಾತ್ರ ಮತ್ತಷ್ಟು ಸಂಕಷ್ಟಗಳ ಮಾಲೆಯಾಗುತ್ತಲೇ ಹೋಗುತ್ತಿದೆ. ಯಾರೂ ಅರಿಯದ ನೇಗಿಲ ಯೋಗಿಯ ಸಂಕಷ್ಟವನ್ನು 'ಧನ್ವಂತರಿ ಚಿಕಿತ್ಸೆ' ಕಥೆಯು ಧ್ವನಿಸುತ್ತದೆ. ಪೌರಾಣಿಕ ಪಾತ್ರಗಳು ಕಥೆಯ ಭಾಗವಾಗುವುದರ ಮೂಲಕ ರೈತನ ನೋವಿನ ಪರಿಧಿಯು ಅನಾದಿ ಕಾಲದಿಂದಲ್ಲೂ ಬಾಧೆ ನೀಡುತ್ತಿರುವಂಥ ರೋಗವಾಗಿದೆ. ರೈತ ಎಂದರೆ ಸಂಕಷ್ಟಗಳ ಸರಮಾಲೆ ಎಂದೇ ಕಾಣುವ ಸಮಾಜ ರೈತ ಪರವಾದಂತಹ ಯಾವ ಕೆಲಸವನ್ನೂ ಮಾಡಿಲ್ಲ. ರೈತನ ಸಂಕಷ್ಟವನ್ನು ಕುರಿತು ವಿಶ್ವಾಮಿತ್ರನು ಹೇಳುವ ಮಾತು ಜಮದಗ್ನಿ, ನೀನಂದು ಆಳುವವರನ್ನೆಲ್ಲಾ ನಿನರ್ಾಮಮಾಡಿ, ಸಮತಾಪ್ರಚಾರಕ್ಕೆ ಜೀವಮಾನವನ್ನೆಲ್ಲಾ ತೆತ್ತುದು ವ್ಯರ್ಥವಾಯಿತು! [1] ಎಂದು ಹೇಳುವ ಮಾತು ವಾಸ್ತವದ ಅಸಮಾನತೆಗೆ ಹಿಡಿದ ಕೈಗನ್ನಡಿಯಾಗಿದೆ. ಕಥೆಯು ರೈತನ ನೋವನ್ನು ಚಚರ್ೆ ಮಾಡುತ್ತ ಕೆಲ ಪರಿಹಾರನ್ನು ಮತ್ತು ಭವಿಷ್ಯದ ನೆಲೆಯಲ್ಲಿ ಆಗಬೇಕಾದ ಪರಿವರ್ತನೆಯನ್ನು ಸೂಚಿಸುತ್ತದೆ. ಎದೆಯ ಮೇಲಿನ ರಾಜ್ಯಭಾರವು ಇವನ

ರೋಗಕ್ಕೆ ಕಾರಣವಾಗಿದೆ. ಅದರ ಭಾರದಿಂದ ರೈತ ರೋಗಿಯಾಗಿದ್ದಾನೆ. ಅದಕ್ಕೆ ಧನ್ವಂತರಿ ಕೊಡುವ ಸಲಹೆ ಮತ್ತು ಭವಿಷ್ಯ, ಬದಲಾವಣೆಯ ಪ್ರತೀಕವಾದ್ದು. ನಿಮಗೆ ಬುದ್ಧಿಯಿಲ್ಲ! ಮೊದಲು ರೋಗ ನಿವಾರಣೆಯಾಗಲಿ! ಆಮೇಲೆ ದೃಢಕಾಯನಾಗುವ ಅವನೇ ಕೆಳಕ್ಕೆ ಬಿದ್ದ 'ರಾಜ್ಯದ ಭಾರ'ವನ್ನು ಎದೆಯಮೇಲೆ ಹಾಕಿಸಿಕೊಳ್ಳುವುದಕ್ಕೆ ಬದಲಾಗಿ, ಹೆಗಲಮೇಲೆ ಹೊತ್ತು, 'ರಾಜ್ಯಭಾರ'ವನ್ನು ವಹಿಸಿ ನಿರ್ವಹಿಸುತ್ತಾನೆ! ಎಂದು ಹೇಳುವ ಮಾತಿನಲ್ಲಿ ಭವಿಷ್ಯದ ಪ್ರಭುತ್ವದಲ್ಲಿನ ಬದಲಾವಣೆಯನ್ನು ಕುರಿತು ಹೇಳುವ ಮಾತಾಗಿದೆ. ಗಂಭೀರವಾದ ವಿಷಯಕ್ಕೆ ಲಘುವಾದ ಹೋಲಿಕೆ, ಹಾಸ್ಯ ವರ್ಣನೆಯ ಸಂದರ್ಭಗಳಲ್ಲಿ ಲಘುವಾದ ವಿಷಯಕ್ಕೆ ಗಂಭೀರವಾದ ಹೋಲಿಕೆಯನ್ನು ಕೊಡುವ ಮೂಲಕವೂ ವಿಸಂಗತಿಯನ್ನು ತರುತ್ತಾರೆ. ಇಲ್ಲೆಲ್ಲ ವಿಡಂಬನೆ ಸೊಗಸಾಗಿದೆ. ಇಂತಹ ಹೋಲಿಕೆಗಳು ಹೀನೋಪಮೆಗಳಲ್ಲ. ವ್ಯಂಗ್ಯವೇ ಇಲ್ಲಿಯ ಉದ್ದೇಶ.[2]

'ಹಾಡು ನೇಗಿಲಯೋಗಿ', 'ಕುಳದ ಕಲಿಗೆ', ಎಂಬ ಕವನಗಳು ಪ್ರೇತ-ಕ್ಯೂ ಕವನ ಸಂಕಲನದಲ್ಲಿ ಪ್ರಕಟಗೊಂಡಿದೆ. 'ಹಾಡು ನೇಗಿಲಯೋಗಿ' ಕವನವು ರೈತನಿಗೆ ಪ್ರೇರಕವಾದ ನೆಲೆಯ ಪ್ರೇರಣೆಯಾಗಿ ಮತ್ತು ಚಿತ್ತ ಸಂತೋಷದಿಂದ ಕೂಡಿದ ಕೆಲಸದಲ್ಲಿ ಎಲ್ಲವೂ ಇಮ್ಮಡಿಗೊಳ್ಳುವ ಸಮೃದ್ಧತೆ ಸಿದ್ಧಿಯನ್ನು ಪಡೆಯಲು ಹಾಡು ನೇಗಿಲಯೋಗಿ ಎಂದು ಕವಿ ಪ್ರೇರೇಪಿಸುತ್ತಾರೆ.

'ಕುಳದ ಕಲಿಗೆ' ಜಗತ್ತಿನ ಆಧಾರ, ಬೆನ್ನ ಮೂಳೆ, ಹೆಸರಿಲ್ಲದೆ ಹೆಸರ ಅರಿಯದೆ, ಹೆಸರೊಲ್ಲದ ಮಹಾಮಹಿಮನು ರೈತ. ಕುಳದ ಕಲಿ ಇವನು, ಯೋಗಿಯಾಗಿರುವನು. ಜಗದ ಉಳಿವು ಮತ್ತು ನಾಳೆಗಳ ಬರೆಯುವ ಬ್ರಹ್ಮ ರೈತ. ನೇಗಿಲ ಮೂಲಕ ಬರೆಯುವ ಬರಹವ ನಮ್ಮ ನಮ್ಮ ನಾಳೆಯ ಹಸಿವಿಗೆ ಅವನು ನೀಡುವ ಅನ್ನ. ನಾಡ ಹಣೆಯ ಬರಹವನ್ನು ಬರೆಯುವ ಯೋಗಿ ಇವನು. ಇಷ್ಟಾದರೂ ನಾವು ರೈತನಿಗೆ ಸಮಾಜ ನೀಡುವ ಮನ್ನಣೆ ಎಷ್ಟು? ಎಂಬುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ.

ಬರಿಯ ಉಳುವ ಕುಳದ ಗೆರೆಯೆ?
ನಾಡ ಹಣೆಯ ಬರಹ ಬರೆವೆ!
ಹೊಲದ ಗಾಂಧಿ, ನೆಲದ ನಾಂದಿ,
ನೀನೆ ರಾಷ್ಟ್ರಶಕ್ತಿ;
ನೆಹರುಗೇನು ಕಡಮೆಯೇನು
ನಿನ್ನ ದೇಶಭಕ್ತಿ?
ಅವರೊ ಹೆಸರು; ನೀನೊ ಉಸಿರು
ನಾಡದೇವಿಗೆ:
ನಂದದೆಂದೂ ಕುಂದದಿರುವ
ನಂದಾ ದೀವಿಗೆ! -'ಕುಳದ ಕಲಿಗೆ'

ದೇಶದ ಭವಿಷ್ಯದ ಅಳಿವು ಉಳಿವಿನ ಸೇವೆಗೆ ರೈತ ಅನಿವಾರ್ಯ ಮತ್ತು ಅಗತ್ಯ. ಅವನು ಮಾಡುವ ವೃತ್ತಿ ಸೇವೆ ಎಲ್ಲದಕ್ಕೂ ಮಿಗಿಲು ಎಂಬುದನ್ನು ಎಲ್ಲರೂ ಮನಗಾಣುವಂತೆ ಕವಿ ಚಿತ್ರಿಸಿದ್ದಾರೆ. ಯಾವ ಕೀರ್ತಿಯನ್ನೂ ಬಯಸದೆ ಕಾಯಕ ಮನೋಧರ್ಮವನ್ನು ಎತ್ತಿ ತೋರುವ ಆದರ್ಶವಾದ ಶಕ್ತಿಯಾಗಿ ರೈತ ಇಂದು ನಮ್ಮೊಡನೆ ಇದ್ದಾನೆ. ರೈತನ ಬದುಕು ಮತ್ತು ಸೇವೆಯನ್ನು ಬಹಳವಾಗಿ ಮೆಚ್ಚಿಕೊಂಡು, ಭಾವುಕತೆಯಿಂದ ಒಂದು ಬಗೆಯ ಕೃತಜ್ಞತಾಭಾವದ ಸಾಲುಗಳು ಹಾಸುಹೊಕ್ಕಾಗಿರುವುದು ಅವರ ಕವನಗಳಲ್ಲಿ ವೇದ್ಯವಾಗಿದೆ. ಆದರೆ ರೈತನ ಬದುಕಿನ ಮೇಲೆ ಚಾರಿತ್ರಿಕವಾಗಿ ನಡೆದಿರುವ ದೌರ್ಜನ್ಯದ ಬಗ್ಗೆಯೂ ಕುವೆಂಪು ದಾಖಲಿಸುತ್ತಾರೆ. ನೊಂದು ಜರ್ಜರಿತನಾಗಿರುವ ರೈತನ ಚಾರಿತ್ರಿಕ ಬದುಕನ್ನು ಅವರು 'ರೈತರ ದೃಷ್ಟಿ' ಕವನದಲ್ಲಿ ಕಾಣಬಹುದು. ಸಾಮ್ರ್ಯಾಜ್ಯಶಾಹಿಗಳ ಸುಲಿಗೆಯಿಂದ, ನಮ್ಮವರ ಕಾಳಗ, ದಂಗೆಗಳಿಂದ ಸದಾಕಾಲ ಹಿಂಸೆಯನ್ನು ಅನುಭವಿಸಿದ ನೋವನ್ನು ಕವನ ಧ್ವನಿಸುತ್ತದೆ. ಚರಿತ್ರೆಯ ಪುಟದಲಿ ರಾಜರ ಕಥೆ, ಸಾಧನೆ, ಕೊಡುಗೆ ಕುರಿತಾದ ಅಧ್ಯಯಗಳನ್ನು ಕಾಣಬಹುದು. ಆದರೆ ಅಲ್ಲಿ ಎಲ್ಲಿಯೂ ನೊಂದ ಬಡವರ, ಕೆಳವರ್ಗದ, ರೈತರ ಸಾವು ನೋವುಗಳು ದಾಖಲಾಗಿರುವುದು ಕಾಣುವುದೇ ಇಲ್ಲ. ಆದರೆ ಕುವೆಂಪು ಅವರು ಶ್ರೀಸಾಮಾನ್ಯನ ನೆಲೆಯಲ್ಲಿ ಇತಿಹಾಸವನ್ನು ಚಿತ್ರಿಸುವ ಪ್ರಯತ್ನವನ್ನು ಕವನದಲ್ಲಿ ಮಾಡಿದ್ದಾರೆ.

ಕರಿಯರದೊ ಬಿಳಿಯರದೊ ಯಾರದಾದರೆ ಏನು?

ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ!
ವಿಜಯನಗರವೊ? ಮೊಗಲರಾಳ್ವಿಕೆಯೊ? ಇಂಗ್ಲಿಷರೊ?
ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ!
ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
ನಮ್ಮವರೆ ಹದಹಾಕಿ ತಿವಿದರದು ಹೂವೆ? -'ರೈತರ ದೃಷ್ಟಿ'

ಸಾಮ್ರಾಜ್ಯಶಾಹಿಯ, ರಾಜ್ಯಶಾಹಿಯ ಸುಲಿಗೆಯನ್ನು ಮೇಲಿನ ಸಾಲುಗಳು ಧ್ವನಿಸುತ್ತದೆ. ರೈತರ ಸುಲಿಗೆ ಮಾಡುವಲ್ಲಿ ನಮ್ಮವರು ಅನ್ಯರು ಯಾವ ಭೇದವಿಲ್ಲದೆ ಜಿಗಣೆಗಳಂತೆ ರೈತನ ನೆತ್ತರ ಕುಡಿದಿದ್ದಾರೆ. ಕವನದಲ್ಲಿ ಶ್ರೀಸಾಮಾನ್ಯ ಮತ್ತು ರೈತ ಒಂದೇ ಆಗಿದ್ದಾರೆ. ಅಂದಿನ ಕಾಲಕ್ಕೆ ಕೃಷಿಯೇ ಮನುಷ್ಯನ ಮೂಲ ಕಸುಬಾಗಿತ್ತು. ಇತಿಹಾಸದಲ್ಲಿರುವ ಸಾಮಾಜ್ಯಶಾಹಿಗಳ ರಕ್ತದಾಹಕ್ಕೆ ಬಡತನದಿಂದ ಬಳಲಿದ ಬಡರೈತನ ಬದುಕೇ ಅವರಿಗೆ ಸಿರಿತನದ ಮೂಲವಾಗಿದೆ. ಈ ಮೂಲಕ ಜಗತ್ತಿನಲ್ಲಿನ ಸಾಮ್ರಾಜ್ಯಶಾಹಿಗಳ ತುಳಿತಕ್ಕೆ ಒಳಗಾದವರ ನೋವನ್ನು ಕವನ ಧ್ವನಿಸುತ್ತದೆ. ಅಧಿಕಾರದ ದಾಹ, ಮೋಹವನ್ನು ಶೂರ್ಪನಖಿಯ ಹೋಲಿಕೆಯೊಂದಿಗಿನ ವಿಡಂಬನೆಯ ವ್ಯಂಗ್ಯವನ್ನು ತರುವುದರ ಮೂಲಕ ಕವಿಯು ಓದುಗರಿಗೆ ಹೊಸ ಚಿಂತನೆಯನ್ನು ಮೂಡಿಸುತ್ತಾರೆ.

ಕೃತ್ತಿಕೆ ಕವನ ಸಂಕಲನದಲ್ಲಿನ 'ಬೆಕ್ಕು-ಇಲಿ' ಕವನವು ಮತ್ತೊಂದು ರೀತಿಯ ವಿಡಂಬನೆಯನ್ನು ಮಾಡುತ್ತ ರೈತ ಮತ್ತು ಶ್ರೀಸಾಮಾನ್ಯನನ್ನು ಒಂದೆಡೆ ತರುತ್ತಾರೆ. 'ಕೊಬ್ಬಿದರು ಕುರಿಗಲ್ಲ ಹಬ್ಬ; ಕುರುಬಗೆ ಮಾತ್ರ! ಎಂಬ ಸಾಲುಗಳು ಸಮಾಜದಲ್ಲಿನ ವಾಸ್ತವವನ್ನು, ಶ್ರೀಮಂತರ ದ್ರೋಹ ಚಿಂತನೆಯನ್ನು ಸ್ಪಷ್ಟವಾಗಿ ಹಿಡಿದಿಟ್ಟಿದ್ದಾರೆ. ಕರ್ಮ ಸಿದ್ಧಾಂತವನ್ನು ಮರು ಚಿಂತನೆಗೆ ಒಳಪಡಿಸುವಂತೆ ಮಾಡುವ ಪದ್ಯ ಇದು. ಕರ್ಮದ ಹೆಸರಿನಲ್ಲೂ ನಡೆಸುವ ಮತ್ತೊಂದು ರೀತಿಯ ಶೋಷಣೆಯನ್ನು ಈ ಕವನದಲ್ಲಿ ಕಾಣಬಹುದು.

..........ಪೈರನು ಬೆಳೆಯೆ
ನೀನು, ಲೋಕಕೆ ಕೂಳು; ಆದರುಣ್ಣಲಿ ನಿನಗೆ
ಕಾಳಿಲ್ಲ, ಓ ರೈತ! ತಿಂದು ಧನಿಕರ ಬುತ್ತಿ
ತೇಗುತಿದೆ; ಬಡಜನರೊ ಹೊಟ್ಟೆ ಬೆನ್ನಿಗೆ ಹತ್ತಿ
ನರಳಿ ಹೊರಳುತ್ತುರುಳುತಿರುವರು ಜವನ ಮನೆಗೆ. -'ಬೆಕ್ಕು-ಇಲಿ'

ಎರಡು ವಿರುದ್ಧವಾದ ಪ್ರಾಣಿಗಳನ್ನು ವಾಸ್ತವದ ಬದುಕಿಗೆ ಹೋಲಿಸುತ್ತ ಬಲಿಯಾಗುವ ಇಲಿಯನ್ನು, ಬಲಿಹಾಕುವ ಬೆಕ್ಕಿನ ನಡೆಯು ಎಂತಹ ಕ್ರೌರ್ಯದಿಂದ ಕೂಡಿರುವುದು ಎಂದು ತಿಳಿಸುತ್ತದೆ. ನವಿಲು ಕವನ ಸಂಕಲನದಲ್ಲಿ ಪ್ರಕಟಗೊಂಡಿರುವ 'ಕಿಟ್ಟಯ್ಯ' ಎಂಬ ರೈತನ ಕುರಿತು ಸಂವಾದ ಮಾದರಿಯ ಕಥನ ಕವನವು ರೈತನ ನೋವು, ಬವಣೆ, ಕಷ್ಟ, ನಷ್ಟಗಳ ಕುರಿತಾದ ಅವಲೋಕನ ಕ್ರಮವು ಯಾವುದೇ ಉತ್ಪ್ರೇಕ್ಷೆಯಿಲ್ಲದೆ ರೈತನ ಬಾಹ್ಯ ಚಿತ್ರವನ್ನು ದರ್ಶಿಸುತ್ತದೆ. ಕಿಟ್ಟಿ ಮತ್ತು ಆನಂದ ಸಂವಾದದಿಂದ ಹಳ್ಳಿಯ ಬದುಕಿನ ದಾರುಣ ಪರಿಸ್ಥಿತಿ ಕಷ್ಟ ಏನೆಂಬುದು ತಿಳಿದು ಬರುತ್ತದೆ. ಕಿಟ್ಟಿ ಕೋಟ್ಯಾನು ಕೋಟಿ ಭಾರತೀಯ ರೈತರ ಪ್ರತಿನಿಧಿಯಾಗುತ್ತಾನೆ.

ಕುವೆಂಪು ಮೂಲತಃ ರೈತ ಕುಟುಂಬದಿಂದ ಬಂದವರು. ರೈತನ ಕಷ್ಟ, ನಷ್ಟ ಏನು ಎಂಬುದು ತಿಳಿದವರು. ಅವರ ಬಾಲ್ಯದಲ್ಲಿ ಆದ ಕೆಲ ಘಟನೆಗಳನ್ನು ಈ ನೆಲೆಯಲ್ಲಿ ವಿವೇಚಿಸಬೇಕು. ಬೆಳೆ ನಷ್ಟವಾಗಿ ಕುಟುಂಬದ ಆರ್ಥಿಕ ಸ್ಥಿತಿ ಹದಗೆಟ್ಟು ತಂದೆಯ ಸೋದರರೊಂದಿಗಿನ ಜಗಳ, ಮುನಿಸು, ಮರಣ. ಆನಂತರದಲ್ಲಿ ಮನೆಯ ಪಾಲಾಗುವ ಪರಿ. ಸುಖವಿದ್ದಾಗ ಒಟ್ಟಿಗಿದ್ದು ನಷ್ಟವಾದಾಗ ಬೇರೆಯಾಗುವ ಕುಟುಂಬದ ಒಡಕನ್ನು, ಅದಕ್ಕೆ ಕಾರಣಗಳೇನು ಎಂಬುದನ್ನು ನೆನಪಿನ ದೋಣಿಯಲ್ಲಿ ಕಾಣಬಹುದು. ಕುವೆಂಪು ಪಾಲಾಗಲು ಒಪ್ಪದೆ ಅವರ ದೊಡ್ಡಚಿಕ್ಕಪ್ಪಯ್ಯ ರಾಮಣ್ಣಗೌಡರ ಜೊತೆ ಉಳಿಯುವುದನ್ನು ಕಾಣಬಹುದು. ರೈತನ ನೋವು, ಕಷ್ಟ ನಷ್ಟವನ್ನು ಬಲ್ಲ ಕುವೆಂಪು ಅವರ ಸಾಹಿತ್ಯ ವಾರಿಧಿಯಲ್ಲಿ ರೈತನ ಪಾತ್ರ ಮತ್ತು ಬದುಕು ಕಾದಂಬರಿ, ಕಥನ ಕವನ, ನೆನಪಿನ ದೋಣಿಯಲ್ಲಿ ಮತ್ತು ಇತರ ಕವನಗಳಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು. ಅವರ ಎರಡೂ ಬೃಹತ್ ಕಾದಂಬರಿಯ ಕಥನ ಭೂಮಿಕೆಯು ಕೃಷಿ ಪ್ರಧಾನ ಬದುಕನ್ನು ಆಶ್ರಯಿಸಿದ ಕುಟುಂಬಗಳ ಬದುಕುಗಳಿಂದ ಕೂಡಿರುವುದೇ ಆಗಿದೆ. ಕುವೆಂಪು ಕಾದಂಬರಿಯಲ್ಲಿ ಕೃಷಿ ಪದ್ಧತಿ, ಕೃಷಿ ಕೆಲಸ, ಕೃಷಿ ಕೆಲಸ ಮಾಡುವ ಆಶ್ರಿತ ಕುಟುಂಬಗಳು, ಯಜಮಾನಿಕೆ ಮತ್ತು ಕೂಲಿಕಾರ ಹೀಗೆ ಬಹಳ ಸ್ಪಷ್ಟವಾದ ನೈಜತೆಯನ್ನು ಕುವೆಂಪು ತಂದಿದ್ದಾರೆ. ಎಲ್ಲೂ ಅಸಹಜತೆಯನ್ನು ವಿಜೃಂಭಿಸದೆ, ನೈಜವಾದ ರೈತ ಬದುಕನ್ನು ಕಾದಂಬರಿಯಲ್ಲಿ ತರುತ್ತಾರೆ.

ಕುವೆಂಪು ಸಾಹಿತ್ಯದಲ್ಲಿ 'ರೈತ'ನನ್ನು, ವರ್ಗ, ವರ್ಣದ ಹಿನ್ನೆಲೆಯಿಂದ ಗಮನಿಸಿದಾಗ ಅವನು ಅಂತ್ಯಜನಾಗಿಯೂ ಉಳಿದ ವರ್ಗಗಳಿಗೆ ತುತ್ತು ನೀಡುವ ದಾತನಾಗಿಯೂ ಕಾಣುತ್ತಾನೆ. ವರ್ಗ ಹಿನ್ನೆಲೆಯಿಂದ ಅವನು ಕಡೆಯಲ್ಲಿ ಇದ್ದಾನೆ. ಶ್ರೀಮಂತರ ತೋಳದ ಹೊಟ್ಟೆ, ಬೆಕ್ಕಿನ ಬುದ್ಧಿಯ ಬಗ್ಗೆ ಮಾರ್ಮಿಕವಾಗಿ ಟೀಕೆ ಮಾಡುತ್ತ, ರೈತನ ದಯನೀಯವಾದ ಸ್ಥಿತಿಯು ಅನಾವರಣವಾಗುತ್ತದೆ. ವರ್ಗದ ಹಿನ್ನೆಲೆಯಲ್ಲಿ ಅಂತ್ಯಜನಾಗೇ ಉಳಿಯುವ ರೈತ, ವರ್ಣದ ನೆಲೆ ಬಂದಾಗಲೂ ಕೂಡ ಕುವೆಂಪು ಕಾದಂಬರಿಗಳನ್ನು ಗಮನಿಸಿದಾಗ ಜಮೀನುದಾರ ಪದ್ಧತಿಯ ಬದುಕನ್ನು

ಚಿತ್ರಿಸುತ್ತಲೇ ಅವರ ಶ್ರೀಮಂತಿಕೆ, ದರ್ಪಗಳನ್ನು ಹೇಳುತ್ತಲೇ ಕೃಷಿ ಆಶ್ರಿತ ಬದುಕುಗಳನ್ನು ನಡೆಸುವ ದಲಿತ ರೈತ ಕುಟುಂಬಗಳ ಬದುಕನ್ನು ಕುವೆಂಪು ಚಿತ್ರಿಸುತ್ತಾರೆ. ಕಾದಂಬರಿಯ ಒಳ-ಹೊರಗು ಜಮೀನುದಾರ ಭೂಮಿಯ ಒಡೆತನವನ್ನು ಹೊಂದಿರುವವನೇ ಹೊರತು ಆತ ರೈತನಲ್ಲ. ಮಣ್ಣಿನ ಸಂಬಂಧವನ್ನು ಹೊಂದಿರುವವನೇ ನಿಜವಾದ ರೈತ ಎಂಬುದು ಕುವೆಂಪು ಅವರ ಬರಹಗಳಲ್ಲಿ ಬಹಳ ಸ್ಪಷ್ಟವಾಗಿದೆ. ಸಿಂಬಾವಿ ಗೌಡ, ಭರಮೈ ಹೆಗ್ಗಡೆ, ಮೇಗರವಳ್ಳಿಯ ಹಳೆಮನೆಯ ಸುಬ್ಬಣ್ಣ ಹೆಗ್ಗಡೆ, ಕೋಣೂರಿನ ರಂಗಪ್ಪಗೌಡ, ಮುಕುಂದಯ್ಯ, ಮತ್ತು ಬೆಟ್ಟಳ್ಳಿ ದೇವಯ್ಯಗೌಡ. ಕಾನೂರು ಹೆಗ್ಗಡಿತಿ ಕಾದಂಬರಿಯ ಚಂದ್ರಯ್ಯಗೌಡ ಇವರುಗಳು ಕೃಷಿ ಮತ್ತು ಕೃಷಿ ಕಸುಬುಗಾರರನ್ನು ಆಶ್ರಯಿಸಿದ್ದರು, ಯಜಮಾನಿಕೆಯ ನೆಲೆಯಿಂದ. ಆದರೆ ನಿಜವಾಗಿಯೂ ಭೂಮಿಯ ಸಂಬಂಧ ಹೊಂದಿದವರು ಹೊಲೆಯರು, ಬೇಲರು, ಮಾದಿಗರು, ಬಿಲ್ಲವರ ಕುಟುಂಬಗಳು. ಈ ಬಗ್ಗೆ ಬಹಳ ಸ್ಪಷ್ಟವಾದ ಮಾತುಗಳು ಶಿವರುದ್ರಪ್ಪನವರು ನಡೆಸಿದ ಸಂದರ್ಶನದಲ್ಲಿ ವ್ಯಕ್ತವಾಗುತ್ತದೆ. ಮಲೆಗಳಲ್ಲಿ ಮದುಮಗಳು ಕಾದಂಬರಿ ಬರುವ ಹೊತ್ತಿಗೆ ಆದ ಬದಲಾವಣೆಯನ್ನು ಸ್ಪಷ್ಟ ಪಡಿಸುತ್ತ ಕಾಣುವ ಮತ್ತು ಅಭಿವ್ಯಕ್ತಿಸುವ ನೆಲೆಯಲ್ಲಿ ಕುವೆಂಪು ಅವರು ಹೇಳುವ ಮಾತು ಬಹಳ ಮುಖ್ಯವಾಗುತ್ತದೆ. ಇಲ್ಲಿ ಯಾವುದೂ ಸಣ್ಣದಲ್ಲ, ಇಲ್ಲಿ ಯಾರೂ ಮುಖ್ಯರಲ್ಲ ಇತ್ಯಾದಿ, ಅದು ಕೇವಲ ಕಾದಂಬರಿಯ ಮಾತಲ್ಲ. ಪೂರ್ಣ ದೃಷ್ಟಿಯಿಂದ ನೋಡಿದಾಗ ಜೀವನದಲ್ಲಿ ನನಗೆ ಮೇಲು-ಕೀಳು ಎಂಬುದಕ್ಕೆ ಅರ್ಥವಿಲ್ಲ[3] ಕುವೆಂಪು ಅರ್ಥಗಳು ಮೀರಿದ ನೆಲೆಯಲ್ಲಿ ಸಹಜವಾದ ಬದುಕನ್ನು ಹಿಡಿದಿಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

ಇಂತಹ ಬದಲಾವಣೆಯ ಪ್ರಭಾವವು ತೇಜಸ್ವಿಯವರಲ್ಲಿ ಮುಂದುವರಿದಿರುವುದನ್ನು ಕಾಣಬಹುದು. ತೇಜಸ್ವಿಯವರು ಸಾಹಿತ್ಯದ ಜೊತೆಗೆ ಕೃಷಿಯನ್ನು ಏಕಕಾಲದಲ್ಲಿ ಜೊತೆ ಜೊತೆಗೆ ನಡೆಸಿಕೊಂಡು ಸಾಗಿದ ಸಾಧಕ. ಕುವೆಂಪು ಅವರ ಕಾವ್ಯದ ಕನಸು ತೇಜಸ್ವಿಯಲ್ಲಿ ಕ್ರಿಯಾ ರೂಪವನ್ನು ಪಡೆದು ವ್ಯಕ್ತವಾಗಿದೆ. ರೈತನಾಗಿ, ರೈತನ ಸಮಸ್ಯೆಗಳನ್ನು ಅರಿತು, ಬೆಳೆ, ಮಳೆ ಇವುಗಳ ಜೊತೆಗೆ ದಲ್ಲಾಳಿಗಳ ಕಾಟ, ಕೃಷಿ ಜೊತೆಗಿನ ಮಾರುಕಟ್ಟೆ ಸಮಸ್ಯೆ, ಬೆಳೆದ ಬೆಳೆಗೆ ಮತ್ತಾರೋ ಬೆಲೆ ನಿಗದಿ ಮಾಡಿ ನಮ್ಮ ಶ್ರಮ ಮತ್ತು ಫಲ ಎರಡನ್ನೂ ಹರಾಜು ಹಾಕುವ ಪರಿ ಇವುಗಳ ಕುರಿತು ಬಹಳ ಮಾರ್ಮಿಕವಾಗಿ ನಡೆಯುವ ವ್ಯವಹಾರಗಳ ನಾಟಕೀಯತೆಯನ್ನು ತೇಜಸ್ವಿ ಬರಹಗಳಲ್ಲಿ ಕಾಣಬಹುದು. ಜುಗಾರಿ ಕ್ರಾಸ್ ಮತ್ತು ಚಿದಂಬರ ರಹಸ್ಯ ಕಾದಂಬರಿಯಲ್ಲಿ ಬರುವ ಏಲಕ್ಕಿ ವ್ಯಾಪಾರದ ಚಿತ್ರಣ. ಬೆಳೆಗಳ ಖರೀದಿಗೆ ಬರುವ ಸುಲೇಮಾನ್ ಬೇರಿ, ಅಬ್ಬಾಸ್ ಬೇರಿಗಳು, ಇವರೊಂದಿಗೆ ಭೂಗತ ಲೋಕದ ಪಾತಕಿಗಳ ನಂಟು ಹೀಗೆ ಇವರುಗಳ ಸವಾರಿ ರೈತ ಸಾಮಾನ್ಯನೊಂದಿಗೆ ಇವರ ವ್ಯವಹಾರ ನಡೆಸುವ ಪರಿ ಆಶ್ಚರ್ಯವಾಗುತ್ತದೆ. ಇಂತಹ ಲೌಕಿಕ ಸಮಸ್ಯೆಗಳ ಮಧ್ಯೆ ಕೈಕೊಡುವ ಮಳೆ, ಮಳೆಯ ಕಾರಣವಾಗಿ ಅನುಭವಿಸುವ ಸಮಸ್ಯೆಯನ್ನು ಮಾಯಾಲೋಕ ಕೃತಿಯು ಅನಾವರಣ ಮಾಡುತ್ತದೆ. ಕಷ್ಟ ಪಟ್ಟು ಬೆಳೆದ ಬೆಳೆಗೆ ಕಾಡು ಹಂದಿ ಕಾಟ, ಅಂತು ಅಣ್ಣಪ್ಪಣ್ಣ ಮತ್ತು ಬಾಬು ಸೇರಿ ನಡೆಸುವ ಬೆಳೆದ ಮೆಣಸಿನಕಾಳು ಖರೀದಿಯಂತ್ತೂ ರೈತರ ಬದುಕಿನ ಅಸಹಾಯಕ ಸ್ಥಿತಿಯನ್ನು ತೋರುತ್ತದೆ. ಸಾಬಿ ಜಲೀಲ ಮಾಡಿಕೊಳ್ಳುವ ಕರಾರು ಮತ್ತು ಬೆಲೆ ಕಟ್ಟುವ ಪರಿ ರೈತರ ಬದುಕಿನ ಮಿತಿ ಮತ್ತು ಎಲ್ಲೆಗಳನ್ನು ಪರಿಚಯಿಸುತ್ತದೆ. ಮಾಯಾಲೋಕದ ರೈತ ಸಂಘ ಮತ್ತು ಸಂಘದ ಚಟುವಟಿಕೆಗಳು ಕೆಲವು ಮಿತಿಗಳಿಂದ ಕೂಡಿದ್ದು ಕೇವಲ ಹೋರಾಟಕ್ಕೆ ಮೀಸಲಾಗಿರುವುದು ಮತ್ತೊಂದು ರೀತಿಯ ಮಿತಿಯನ್ನು ಅದು ತೋರುತ್ತದೆ. ಆಧುನಿಕತೆ ಮತ್ತು

ಹಳೆಯ ಕೆಲ ಪದ್ಧತಿಗಳಿಂದ ಎದುರಾಗುತ್ತಿರುವ ಹೊಸ ಸಮಸ್ಯೆಗಳಿಗೆ ಪರಿಹಾರಕ್ಕಿಂತ ಅದಕ್ಕೆ ಆಹಾರವಾಗುತ್ತಿರುವ ದೀನರ ಬದುಕುಗಳನ್ನು ಮಾಯಾಲೋಕ ಕೃತಿಯಲ್ಲಿ ಕಾಣಬಹುದು.

ತೇಜಸ್ವಿ ಕಾದಂಬರಿಯಲ್ಲಿ ಬಹಳ ಮುಖ್ಯವಾಗಿ ಗುರುತಿಸಬಹುದಾದ ಬಹಳ ವಿಶೇಷವಾದ ಒಂದಂಶವೇನೆಂದರೆ ವೃತ್ತಿ ಮತ್ತು ಉದ್ಯೋಗ ಪಾತ್ರಗಳ ಪರಿಕಲ್ಪನೆ ಆಧುನಿಕತೆಯ ಕೊಡುಗೆಯಾಗಿ ಬರುವ ಉದ್ಯೋಗ ಎಂಬ ಕಲ್ಪನೆ ದೇಸಿ ವೃತ್ತಿ ಮತ್ತು ಬದುಕನ್ನು ಭಿನ್ನ ನೆಲೆಗಳಲ್ಲಿ ಛಿದ್ರ ಮಾಡುವುದನ್ನು ಕಾಣಬಹುದು. ಆದರೆ ತೇಜಸ್ವಿಯ ಅವರ ಸಾಹಿತ್ಯದ ಪ್ರಮುಖ ಪಾತ್ರಗಳು ಉದ್ಯೋಗಿಗಳಾಗಿರದೆ ವೃತ್ತಿ ಪರ ಶ್ರಮಜೀವಿ ಬದುಕು ನಡೆಸುವುದನ್ನು ಕಾಣಬಹುದು. ಎಂ.ಎ ಓದಿ ಉದ್ಯೋಗ ಮಾಡದೆ, ಕೃಷಿಕನಾಗಿ ಬದುಕುವ 'ಜುಗಾರಿ ಕ್ರಾಸ್' ಕಾದಂಬರಿಯ ನಾಯಕ ಸುರೇಶ ಮತ್ತು ಗೌರಿ 'ಕರ್ವಾಲೊ' ಕಾದಂಬರಿ ನಿರೂಪಕ, 'ನಿಗೂಢ ಮನುಷ್ಯರು' ಕಥೆಯ ಗೋಪಾಲಯ್ಯ, ಸ್ವರೂಪ ಕಥೆಯ ನಿರೂಪಕ, ಹುಲಿಯೂರ ಸರಹದ್ದು ಕಥೆಯ ಸೋಮು, ಕಿರುಗೂರಿನ ಗಯ್ಯಾಳಿಗಳು ಕಥೆಯ ಪುರುಷ ಮತ್ತು ಸ್ತ್ರೀ ಪಾತ್ರಗಳು. ಕಾಡು ಮತ್ತು ಕ್ರೌರ್ಯ ಕಾದಂಬರಿಯ ಸೋಮು ಮತ್ತು ನಳಿನ ಈ ಪಾತ್ರಗಳ ಬದುಕು ಮತ್ತು ವೃತ್ತಿಯನ್ನು ಗಮನಿಸಿದಾಗ ಕೃಷಿ ಪ್ರಧಾನ ಬದುಕನ್ನು ಆಯ್ಕೆ ಮಾಡಿಕೊಂಡು ಅವರು ಹಳ್ಳಿಯ ಕಡೆ ಮುಖ ಮಾಡಿದವರಂತೆ ಕಾಣುತ್ತಾರೆ. ತೇಜಸ್ವಿಯವರ ಬದುಕು ಮತ್ತು ಕಾರಂತರ ಮರಳಿ ಮಣ್ಣಿಗೆ ಕಾದಂಬರಿಯನ್ನು ಈ ಪಾತ್ರಗಳು ಧ್ವನಿಸುತ್ತವೆ.

ಅದೇ ರೀತಿ ಉದ್ಯೋಗವನ್ನು ಹುಡುಕಿಕೊಂಡು ಹೋಗಿ, ಬದುಕು ಕಟ್ಟಿ ಕೊಂಡವರ ಛಿದ್ರವಾದ, ನೂರೆಂಟು ಸಮಸ್ಯೆಗಳ ಪಾಡನ್ನು ಅವರ ಸಾಹಿತ್ಯದಿಂದಲೇ ಗಮನಿಸಬಹುದು. ಸಕರ್ಾರಿ ವೃತ್ತಿ ಮಾಡಿ ನಿವೃತ್ತನಾದ ತಬರನ ಬದುಕು, ಅವನು ಅನುಭವಿಸುವ ಸಂಕಷ್ಟಗಳ ನೂರೆಂಟು ಕೋಟಲೆಯನ್ನು ಕಥೆ ವಾಸ್ತವತೆಯೊಂದಿಗೆ ದೃಢಪಡಿಸುತ್ತಲೇ ಸಾಗುತ್ತದೆ. ಅದೇ ರೀತಿ ಅಬಚೂರಿನ ಪೋಸ್ಟಾಫೀಸ್ ಕಥೆಯ ಬೋಬಣ್ಣನ ಸಂಸಾರದ ಒಡಕು, ಅದಕ್ಕೆ ಕಾರಣವಾದ ಪೋಸ್ಟಾಫೀಸು ಮತ್ತು ಉದ್ಯೋಗ. ಊರ ಸಮಸ್ಯೆಗಳಿಗೆಲ್ಲ ಕೇಂದ್ರವಾಗಿ ಮನೆಯೇ ಹಾಳಾಗುವ ಪರಿಸ್ಥಿತಿ ಎದುರಾಗಿ ಕಡೆಗೆ ಪೋಸ್ಟಾಫೀಸ್ ಮುಚ್ಚುವ ಮೂಲಕ ಕಥೆ ಅಂತ್ಯವಾಗುತ್ತದೆ. ಕುಬಿ ಮತ್ತು ಇಯಾಲ ಕತೆಯಲ್ಲಿ ಡಾಕ್ಟರ್ ವಿ.ಎಸ್. ಕುಬೇರನಾಥ, ಕುಬಿ ಎಂದೇ ಪ್ರಸಿದ್ಧಿ ಹೊಂದಿದ್ದ ಇವರು, ಇಯಾಲನ ಸಾವು ಮತ್ತು ಅದರ ಹಿಂದಿರುವ ಕರಾಳವಾದ ಚಿತ್ರಣವನ್ನು ಹುಡುಕುತ್ತ ಕಥೆಯು ಆಧುನಿಕತೆಯ ಹೊಸ ಅಪಾಯಗಳನ್ನು ದಾಖಲಿಸುತ್ತ ಹೊಸ ಮೌಢ್ಯವನ್ನು, ಛಿದ್ರವಾದ ಬದುಕುಗಳನ್ನು ಕಥೆ ಸಾಕ್ಷೀಕರಿಸುತ್ತದೆ.

ತುಕ್ಕೋಜಿ ಕತೆಯಲ್ಲಿ ಬದುಕು ಮತ್ತು ಉದ್ಯೋಗದೊಂದಿಗೆ ಸಂಘರ್ಷ ಏರ್ಪಡುವುದನ್ನು ಕಾಣಬಹುದು. ಟೈಲರ್ ತುಕ್ಕೋಜಿಯ ಬದುಕು ಮತ್ತು ಬದಲಾದ ಕಾಲದ ಅಭಿರುಚಿಯೊಂದಿಗೆ ಉಂಟಾದ ಅಂತರದಿಂದಾಗಿ ಒಳ್ಳೆಯ ಹೆಸರು ಸಂಪಾದಿಸಿ ಪ್ರಸಿದ್ಧನಾಗಿದ್ದ ತುಕ್ಕೋಜಿ, ಕುಟುಂಬದ ಬೆಳವಣಿಗೆಯನ್ನು ಭಾವುಕ ಸಂಬಂಧಗಳನ್ನು ಯಾಂತ್ರಿಕವಾಗಿ ಕಾಣಲು ಹೋಗಿ ಹೊಸ ಸಮಸ್ಯೆಗೆ ಈಡಾಗುವನ್ನು. ಡ್ರೈವರ್ನ ಹೃದಯಸ್ಪರ್ಶ ಯಾದ ಮಾತುಗಳಿಂದಾಗಿ ತುಕ್ಕೋಜಿ ಮತ್ತು ಸರೋಜರ ದಾಂಪತ್ಯದ ಅಸಹನೆಗಳು ದೂರಾಗುತ್ತದೆ. ಆಧುನಿಕ ಬದುಕು ಉಂಟುಮಾಡುವ ಧಾವಂತವನ್ನು ತೇಜಸ್ವಿ ಕತೆಯಲ್ಲಿ ಭಿನ್ನ ನೆಲೆಗಳಲ್ಲಿ ಕಾಣಬಹುದು. ನಮ್ಮ ಕಣ್ಣ ಮುಂದೆಯೇ ಸಂಭವಿಸುತ್ತಿರುವ ಎಷ್ಟೋ ಮುಖ್ಯ ಸಂಗತಿಗಳಿಗೆ ನಾವು ಕುರುಡಾಗಿರುತ್ತೇವೆ ಎಂಬ ತೇಜಸ್ವಿಯ ಮಾತುಗಳು ನಮ್ಮ ಕುರುಡುತನವನ್ನು ಸಾಕ್ಷೀಕರಿಸುತ್ತದೆ

ಇಂತಹ ಘಟನೆಗಳು. ಕಥೆ ಮತ್ತು ಕಾದಂಬರಿಯ ಪಾತ್ರಗಳ ಮೂಲಕ ಮಾತನಾಡುತ್ತಲೇ ಭವಿಷ್ಯದ ಕರಾಳ ಬದುಕನ್ನು ತೆರೆದಿಡುತ್ತಾರೆ. ಆಧುನಿಕ ಬದುಕಿನ ಉದ್ಯೋಗ ಮತ್ತು ಹಳ್ಳಿಯ ಕಸುಬುಗಳ ನಾಶ ಹೊಸ ಸಮಸ್ಯೆಯ ಕೇಂದ್ರ ಬಿಂದು ಆಗಿದೆ. ಎಂಗ್ಟನನ್ನು ದೂರದಿಂದ ನೋಡಿದಾಗ ಪಾಪ ಎನ್ನಿಸಿತು. ನಾಗರೀಕತೆ ಮುಂದುವರಿಯುತ್ತಾ ಎಂಗ್ಟನ ಕುಲಕಸುಬುಗಳು, ಕೈಚಳಕಗಳು ನಿಧಾನವಾಗಿ ನಿರುಪಯುಕ್ತವಾಗುತ್ತಿದ್ದುವು. ಸರ್ಕಾರ ಹಾವಿನ ಚರ್ಮ ರಫ್ತು ಮಾಡುವುದು ನಿಷೇಧಿಸಿದ ಮೇಲೆ ಅವನ ಚರ್ಮಗಳಿಗೆ ದುಡ್ಡು ಸಿಗುತ್ತಿರಲಿಲ್ಲ. ಅವನ ಚಕ್ರಾಣಿಯ ಬೇರು, ಚಿತ್ರಮೂಲದ ಬೇರು, ಸರ್ಪಗಂಧಿ, ಅಳಲೇಕಾಯಿಗಳೂ ವಿಲಾಯಿತಿ ಔಷಧದ ಎದುರು ಗಿರಾಕಿ ಕಳೆದುಕೊಂಡಿದ್ದುವು. ಮೊದಲಿನಂತೆ ಮೊಲ ಕವುಜು ಹಕ್ಕಿ ನೀರು ನಾಯಿಗಳನ್ನು ಬೇಟೆಯಾಡುವುದಕ್ಕೂ ಅರಣ್ಯ ಇಲಾಖೆಯವರು ಅವಕಾಶ ಕೊಡುತ್ತಿರಲಿಲ್ಲ. ಎಂಗ್ಟನಿಗೆ ಮನಸಿನಾಳದಲ್ಲಿ ಪರಕೀಯನಾಗುತ್ತ, ಏಕಾಂಗಿಯಾಗುತ್ತ ಇರುವುದರ ಅರಿವಿದ್ದಿರಬಹುದು.[4] ಗ್ರಾಮಗಳಲ್ಲಿ ಬದುಕು ನಿರ್ವಹಣೆ ಮಾಡಲು ಪರಿಸರ ಆಧಾರಿತ ಕಸುಬುಗಳನ್ನು ನೆಚ್ಚಿಕೊಂಡು ಇದ್ದ ಎಂಗ್ಟನಂತಹ ಕಸುಬುದಾರರು ಕೂಡ ಕಣ್ಮರೆಯಾಗುತ್ತಿದ್ದಾರೆ. ಅವರು ತಿಳಿದು ಕೊಂಡಿದ್ದ ಕೆಲ ಅಮೂಲ್ಯವಾದ ವಿದ್ಯೆಗಳು, ಗಿಡ ಮೂಲಿಕೆಗಳು ಇಂದು ಕಾಣದಂತೆ ನಾಶವಾಗುತ್ತಿದೆ. ಆಧುನಿಕತೆಯಿಂದಾಗಿ ಕೃಷಿ ಸೇರಿದಂತೆ ಉಪಕಸುಬುಗಳು ಕೂಡ ಹೊಸ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡಿದೆ. ಮಾರುಕಟ್ಟೆ, ಸಾರಿಗೆ, ಬಿತ್ತನೆ ಬೀಜಗಳಲ್ಲಿ ಮೋಸ, ಎಲ್ಲವನ್ನೂ ಮಾರುಕಟ್ಟೆ ಮೂಲಕವೇ ಪಡೆದು ನಿಡುವಂತಹ ಜಟಿಲವಾದ ವ್ಯವಸ್ಥೆಯನ್ನು ಸರ್ಕಾರ ಸೇರಿದಂತೆ ಬಂಡವಾಳಶಾಹಿ ವ್ಯವಸ್ಥೆ ನಿರ್ಮಾಣ ಮಾಡಿ ಬಿಟ್ಟಿದೆ.

‘ಸಮೃದ್ಧಿಯ ಶಾಪ' ಎಂಬ ಲೇಖನದಲ್ಲಿ ತೇಜಸ್ವಿ ಚರ್ಚೆ ಮಾಡುತ್ತ ಹೇಳುವ ವಿಚಾರಗಳು ಈ ನೆಲೆಯಲ್ಲಿ ಬಹಳ ಮುಖ್ಯವಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಮಡ್ಡಿಕೆರೆಯಲ್ಲಿ ಒಬ್ಬ ರೈತ ಬ್ಯಾಂಕಿನಿಂದ ಸಾಲ ಪಡೆದು ತನ್ನ ಭೂಮಿಯಲ್ಲಿ ಎಲೆಕೋಸು ಬೆಳೆ ಬೆಳೆದಿದ್ದ. ಫುಟ್ ಬಾಲ್ ಗಾತ್ರದ ಎಲೆಕೋಸು ನೋಡುಗರಿಗೆ ಬಹಳ ಆಶ್ಚರ್ಯವನ್ನು, ವಿಜ್ಞಾನಿಗಳ ಕಣ್ಣಿಗೆ ಮಹಾಸಾಧನೆ ಎಂಬಂತೆ ತೋರುತ್ತದೆ. ಬ್ಯಾಂಕಿಗೆ ಇವನನ್ನು ಮಾದರಿ ರೈತನನ್ನಾಗಿ ಬಿಂಬಿಸುವ ಉಮೇದು. ಆದರೆ ಅವನು ಆ ನಾಲ್ಕೈದು ಲಾರಿಗಳಷ್ಟು ತುಂಬ ಬಹುದಾದ ಎಲೆಕೋಸು ಮಾರಲಾಗದೆ ಪಟ್ಟಪಾಡು, ಬೆಲೆ ಕಡಿಮೆಯಾಗಿ ಅದನ್ನು ಮುಂಬೈ ತನಕ ಲಾರಿ ಬಾಡಿಗೆ ಕೊಟ್ಟು ಅಲ್ಲಿ ಮಾರಿ ಬಂದ. ಉಳಿದಿದ್ದನ್ನು ಧರ್ಮಸ್ಥಳದ ಅನ್ನ ಸಂತರ್ಪಣೆಗೆ ಪುಕ್ಕಟೆ ಕೊಟ್ಟು ಕಡೆಗೆ ಸಾಲ ತೀರಿಸಲಾಗದೆ ತಲೆಮರೆಸಿಕೊಂಡು ಇರಬೇಕಾದ ಸ್ಥಿತಿಗೆ ಬಂದ. ದೇಶದಲ್ಲಿ ಇರುವ ಈ ಒಂದು ವಿಚಿತ್ರವಾದ ಸಮಸ್ಯೆ ಕುರಿತು ತೇಜಸ್ವಿ ಮಾತನಾಡುತ್ತಾರೆ. ಏನೆಂದರೆ ವಿಜ್ಞಾನಿಗಳು ಸಭೆ ಸಮಾರಂಭದಲ್ಲಿ ರೈತನಿಗೆ ಬೆಳೆ ಕುರಿತು ವಿವರವಾದ ಮಾಹಿತಿ ಮತ್ತು ಅದರ ಉತ್ಪಾದನೆ ಬಗ್ಗೆ ಸಾಕಷ್ಟು ವಿಚಾರಗಳನ್ನು ತಿಳಿಸುವರು. ಆದರೆ ಬೆಳೆದ ಬೆಳೆಯನ್ನು ಸರಿಯಾದ ಬೆಲೆಗೆ ಹೇಗೆ ಮಾರುವುದು ಎಂದು ಮಾತ್ರ ಹೇಳುವುದಿಲ್ಲ. ಪ್ರತಿಯೊಬ್ಬರಿಗೂ ಈ ನೆಲೆಯಲ್ಲಿ ಇರಬಹುದಾದ ಸಾಮಾಜಿಕ ಸಮಸ್ಯೆಗಳ ಕುರಿತು ಸ್ವಲ್ಪ ಯೋಚಿಸಬೇಕು. ವಿಜ್ಞಾನಿಗಳು ಸರ್ಕಾರದ ಮೇಲೆ ಆಕ್ಷೇಪ ಹೇಳುವರು. ಸರ್ಕಾರಕ್ಕೆ ಮಾರುಕಟ್ಟೆ ಜವಬ್ದಾರಿ ಹೊರಲು ಸಾಧ್ಯವಿಲ್ಲ. ಸಹಕಾರಿ ಸಂಘಗಳನ್ನು ತೆರೆಯುವುದರ ಮೂಲಕ ಅವರಿಗೆ ಲಾಭಮಾಡಿಕೊಡುವುದಾಗಿ ಹೇಳುತ್ತಾರೆ. ಆದರೆ ಬೆಲೆ ನಿಗದಿ ಮಾಡುವ ಜವಾಬುದಾರಿ ಯಾರಿಗಿದೆ? ಎಲ್ಲ ಕೃಷಿ ಬೆಳೆ ಮಾರುಕಟ್ಟೆಯಲ್ಲಿ ಬೆಲೆ ಹೇಗೆ ಒಂದೇ ರೀತಿಯಲ್ಲಿ ನಿರ್ಧರಿಸುತ್ತಾರೆ. ದೇಶಕ್ಕೆ ಎಷ್ಟು ವಿವಿಧವಾದ ಆಹಾರ ಉತ್ಪಾದನೆಯಾಗ ಬೇಕು, ಯಾವ ಯಾವ ಮಾಸದಲ್ಲಿ ಅದರ ಕಟಾವು ಆಗಬೇಕು, ಎಷ್ಟು ಜನರಿಗೆ ಬೆಳೆ ಬೆಳೆಯಲು ಅವಕಾಶ ನೀಡಬೇಕು ಎಂಬ ಮಾಹಿತಿಯನ್ನು

ಅಧಿಕಾರಗಳು ಲೆಕ್ಕಹಾಕಿ ಮುಂಚಿತವಾಗಿ ರೈತರಿಗೆ ತಿಳಿಸಿ ಬೆಳೆಯಲು ಪ್ರೋತ್ಸಾಹಿಸಬೇಕು. ಅದರಿಂದ ಅನಗತ್ಯವಾಗಿ ಅಪಾರ ಪ್ರಮಾಣದಲ್ಲಿ ಬೆಳೆದು ಬೆಲೆ ಇಲ್ಲದೆ ನಷ್ಟ ಮಾಡಿಕೊಳ್ಳುವುದನ್ನು ತಪ್ಪಿಸಬಹುದು. ಅವುಗಳನ್ನು ಶೇಖರಿಸುವ ಸುಸಜ್ಜಿತ ಉಗ್ರಾಣಗಳ ಸ್ಥಾಪನೆ ಮಾಡಬೇಕು. ಇಂತಹ ಸುಧಾರಣೆಗಳನ್ನು ಸರ್ಕಾರಗಳು ಮಾಡದೇ ಹೋದರೆ ರೈತನ ಬದುಕು ಕೂಡ ಇಂತಹ ಹೊಸ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಅವರು ಹೊರಬರಲಾದೆ ಸಾಯಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ. ಇಂದು ಕೂಡ ನಮ್ಮ ನಡುವಿನ ರೈತರ ಸಮಸ್ಯೆಗಳು, ರೈತನ ಆತ್ಮಹತ್ಯಾ ಪ್ರಕರಣಗಳು ಹೆಚ್ಚುತ್ತಿದ್ದು, ಅವರ ಕುಟುಂಬಕ್ಕೆ ನೀಡುವ ಹಣ ಪರಿಹಾರ ಒಂದೇ ಪರಿಹಾರವಲ್ಲ. ರೈತನೆಡೆಗೆ ರಾಜಕೀಯ ಮತ್ತು ಅರ್ಥಿಕ ಅಧಿಕಾರ ವರ್ಗಾವಣೆಯಾಗಬೇಕು. ಅದೇ ರೀತಿ ಸರ್ಕಾರ ಈ ಬಗ್ಗೆ ಅಗತ್ಯವಾದ ಸುಸಜ್ಜಿತವಾದ ಯೋಜನೆಗಳ ನಕ್ಷೆ ಸಿದ್ಧಪಡಿಸಿ, ವಾರ್ಷಿಕ ಅಗತ್ಯ ಬೆಳೆಗಳು ಎಷ್ಟು ಪ್ರಮಾಣದಲ್ಲಿ ಬೇಕು, ಅದಕ್ಕೆ ತಗಲುವ ವೆಚ್ಚ, ಮಾರಾಟದ ಬೆಲೆ ನಿಗಧಿ, ಅಷ್ಟೇ ಪ್ರಮಾಣದ ಬೆಳೆ ಬೆಳೆಯಲು ರೈತರಿಗೆ ನಿಗದಿಪಡಿಸಬೇಕು. ಸರಿಯಾದ ಮಾರ್ಗಸೂಚಿ ಇಲ್ಲದೆ ಮಾಹಿತಿ ಇಲ್ಲದೆ ಬೆಳೆದ ಬೆಳೆ ಕೊಳ್ಳುವ ಗ್ರಾಹಕರಿಲ್ಲದೆ ನಷ್ಟವಾಗುತ್ತದೆ. ಇದು ನಿಜಕ್ಕೂ ಸರ್ಕಾರ ಮತ್ತು ಜಿಲ್ಲಾ ಕೃಷಿಮಾರುಕಟ್ಟೆ ಅಧಿಕಾರಿಗಳು ಮಾಡಬಹುದಾದ ಕೆಲಸ. ಇದರಿಂದ ಆಗಬಹುದಾದ ನಷ್ಟ ತಪ್ಪಿಸಬಹುದು. ಇದರೊಂದಿಗೆ ಅಗತ್ಯವಾದ ಪೂರಕ ಬೆಳೆ ಬೆಳೆಯಲು ಪ್ರೋತ್ಸಾಹವು ಸಿಗುವುದು. ಇದರಿಂದ ಬೇಡಿಕೆ ಇಲ್ಲದ ಬೆಳೆ ಬೆಳೆದು ಸಾಯುವ ಅನ್ನದಾತನನ್ನು ಉಳಿಸಬಹುದು.

ತೇಜಸ್ವಿ ಸಾಹಿತ್ಯ ಮತ್ತು ಅವರ ಆಲೋಚನೆಗಳಲ್ಲಿ ಮೂಡಿದ ರೈತನ ಸಂಕಷ್ಟಗಳು, ಅದಕ್ಕೆ ಅವರೇ ಸೂಚಿಸುವ ಸುಲಭವಾದ ಮಾರ್ಗಸೂಚಿಗಳು ಪ್ರಸ್ತುತವಾಗಿದ್ದು ಈ ಬಗ್ಗೆ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಹಾಗೂ ಯುವ ರೈತರು ಸಂಘಟಿತರಾಗಿ ಯೋಗ್ಯ ಮಾಹಿತಿ ಆಧಾರಿತ ಬೆಳೆ, ಉತ್ಪಾದನೆ, ಮಾರಾಟ ವ್ಯವಸ್ಥೆಯ್ನು ಒಮ್ಮೆ ಜಾರಿಗೆ ತಂದರೆ. ಅದು ಯಶಸ್ವಿಯಾಗಿ ಮುಂದುವರಿಯುತ್ತದೆ. ಸಾಧ್ಯವಾದಷ್ಟು ಆರ್ಥಿಕ ಅಪಾಯ ಮತ್ತು ನಷ್ಟವನ್ನು ಕೂಡ ತಪ್ಪಿಸಬಹುದು.

ಕುವೆಂಪು ಸಾಹಿತ್ಯದಲ್ಲಿ ಕಾಣುವ ರೈತ ಮತ್ತು ತೇಜಸ್ವಿಯವರ ಸಾಹಿತ್ಯದಲ್ಲಿ ಕಾಣುವ ರೈತ ಒಬ್ಬನೇ ಆದರೂ ಅವರು ವಿವರಿಸುವ ರೀತಿ, ಅವರ ವಿಚಾರಗಳ ಹಿಂದಿನ ತಾತ್ವಿಕತೆಯಲ್ಲಿ ಮಾತ್ರ ವೈವಿಧ್ಯತೆಯನ್ನು ಕಾಣಬಹುದು. ಮತ, ವರ್ಗ, ಜಾತಿ ಇವುಗಳ ಸಂಕೋಲೆಗಳ ನಡುವೆ ಬಾಡುವ ಜೀವಗಳು ಎಷ್ಟೋ. ಅದೊಂದಿಗೆ ಜಗಕ್ಕೆಲ್ಲ ಅನ್ನ ಕೊಡುವ ರೈತನ ನೋವು ಮತ್ತು ಸಾವು ಆತಂಕವನ್ನು ಮೂಡಿಸುವಂಥದ್ದು. ಈ ಬಗ್ಗೆ ಕುವೆಂಪು ಮತ್ತು ತೇಜಸ್ವಿಯವರ ಸಾಹಿತ್ಯ ನೀಡುವ ಮಾಹಿತಿ ನಿಜಕ್ಕೂ ಉಪಯುಕ್ತವಾದದ್ದು ಮತ್ತು ಅನುಸರಣೀಯವಾದದ್ದು. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ರೈತರಿಗೆ ನೀಡಬೇಕು ಮತ್ತು ಸರ್ಕಾರದ ಗಮನವನ್ನು ಸೆಳೆಯುವ ಪ್ರಯತ್ನವನ್ನು ಅವರು ಮಾಡಿದ್ದಾರೆ. ಅದು ಅನುಷ್ಠಾನವಾದರೆ ಸಾಧ್ಯವಾದಷ್ಟು ಅನುಕೂಲ ರೈತರಿಗೆ ಆಗುತ್ತದೆ.

ಸರಳ ವಿವಾಹ, ಅಂತರ್ ಜಾತಿ ವಿವಾಹದಿಂದ ಜಾತಿ ವಿನಾಶ ಸಾಧ್ಯ ಮತ್ತು ಅಂತಹ ವಿವಾಹಕ್ಕೆ ಪ್ರೋತ್ಸಾಹವನ್ನು ಸರ್ಕಾರ ನೀಡುವುದರ ಮೂಲಕ ಒಂದು ತಲೆಮಾರಿಗೆ ವಿಶೇಷ ಮೀಸಲಾತಿಯನ್ನು ಘೋಷಿಸಲು ತೇಜಸ್ವಿ ಸಲಹೆ ನೀಡಿದ್ದು ಕೂಡ ಈ ಎಲ್ಲಾ ಹಿನ್ನೆಲೆಗಳಿಂದ ಬಹಳ ಮುಖ್ಯವಾದದ್ದು. ಸಾಮಾಜಿಕ ಮತ್ತ್ ಅರ್ಥಿಕಸಮಾನತೆ ತರುವಲ್ಲಿ

ಕುವೆಂಪು ಮತ್ತು ತೇಜಸ್ವಿ ಇಬ್ಬರ ಚಿಂತನೆಯ ಒಳಗೆ ಗಾಂಧಿ ಹಾಗೂ ಲೋಹಿಯಾ ಪ್ರಭಾವವಿರುವುದನ್ನು ಕಾಣಬಹುದು.

**ಕೊನೆ ಟಿಪ್ಪಣಿ**

1. ಕುವೆಂಪು, ಧನ್ವಂತರಿ ಚಿಕಿತ್ಸೆ, ಸಮಗ್ರ ಗದ್ಯ ಸಂಪುಟ-2, ಪುಟ:269
2. ಎಂ.ಎಚ್. ಕೃಷ್ಣಯ್ಯ, ಕಾವ್ಯಭಾಷೆ, ಅಂಕಿತ ಪುಸ್ತಕ, 2010, ಪುಟ: 121.
3. ಕುವೆಂಪು, ಕುವೆಂಪು ಸಮಗ್ರ ಗದ್ಯ ಸಂಪುಟ-2. ಪುಟ: 1045
4. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, 2012, ಪುಟ:

**ಪರಾಮರ್ಶೆ**


1. ಕುವೆಂಪು, ಕುವೆಂಪು ಅವರ ಮೂರು ನಾಟಕಗಳು, ಶೂದ್ರ ತಪಸ್ವಿ ನಾಟಕದ ಮುನ್ನಡಿ, 02-01-1944, ಕರ್ನಾಟಕ ಸಾಹಿತ್ಯ ಅಕಾಡೆಮಿ, 2003, ಪುಟ: 121.
2. ಅದೇ;
3. ಕುವೆಂಪು, ಕುವೆಂಪು ಅವರ ಮೂರು ನಾಟಕಗಳು, ಶೂದ್ರ ತಪಸ್ವಿ ಮಾರ್ನುಡಿ, 24-07-1947, ಕರ್ನಾಟಕ ಸಾಹಿತ್ಯ ಅಕಾಡೆಮಿ,2003, ಪುಟ: 129
4. ಅದೇ;
5. ಅದೇ;
6. ಲೇ: ಡಾ.ಕೆ. ಮರುಳಸಿದ್ದಪ್ಪ, ಕುವೆಂಪು ನಾಟಕಗಳು: ವಸ್ತು ಮತ್ತು ರೂಪ, ಡಾ.ಚಕ್ಕೆರೆ ಶಿವಶಂಕರ್(ಸಂ) ಸಹ್ಯಾದ್ರಿಯ ಸೂರ್ಯ, ಕ.ಸಾ.ಪ, ಬೆಂ., ಪುಟ: 157
7. ಡಿ.ಆರ್. ನಾಗರಾಜ್, ಕುವೆಂಪು ಕೃತಿಗಳಲ್ಲಿ ವರ್ಣ-ವರ್ಗ ಸಂಘರ್ಷ, ಅಕ್ಷರ ಪ್ರಕಾಶನ, 2003, ಪುಟ: 33
8. ಗುರುಲಿಂಗ ಕಾಪಸೆ, ಅಧ್ಯಕ್ಷರ ನುಡಿ, ಕುವೆಂಪು ಅವರ ಮೂರು ನಾಟಕಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಬೆಂ 2003/12/29
9. ಲೇ: ಲಿಂಗದೇವರು ಹಳೆಮನೆ, ಕುವೆಂಪು ನಾಟಕಗಳು: ಒಂದು ಹಿನ್ನೋಟ, ಡಿ.ಎಸ್.ನಾಗಭೂಷಣ (ಸಂ) ಕುವೆಂಪು ಒಂದು ಪುನರನ್ವೇಷಣೆ, ಲೋಹಿಯ ಪ್ರಕಾಶನ, ಬಳ್ಳಾರಿ. 2005, ಪುಟ: 187
10. ಕುವೆಂಪು, ಕುವೆಂಪು ಅವರ ಮೂರು ನಾಟಕಗಳು, ಜಲಗಾರ ನಾಟಕ, 2003, ಪುಟ: 29.
11. ಲೇ. ಬಿ.ಎನ್. ನಾಗರಾಜ್ ಭಟ್, ಜಲಗಾರ ಮತ್ತು ಸಮಕಾಲೀನ ಸಮಸ್ಯೆ, ಡಾ.ಚಕ್ಕೆರೆ ಶಿವಶಂಕರ್(ಸಂ) ಸಹ್ಯಾದ್ರಿಯ ಸೂರ್ಯ, ಕ.ಸಾ.ಪ, ಬೆಂ., ಪುಟ; 164.
12. ಕುವೆಂಪು, ಕುವೆಂಪು ಅವರ ಮೂರು ನಾಟಕಗಳು, ಬೆರಳ್ ಗೆ ಕೊರಳ್, 2003, ಪುಟ: 115
13. ಡಾ.ಎಚ್. ತಿಪ್ಪೇರುದ್ರಸ್ವಾಮಿ, ಕುವೆಂಪು ಅವರ ನಾಟಕಗಳು, 1969, ಪುಟ: 122.
14. ಲೇ: ಎಂ.ಎಸ್. ವೇದಾ, ಬೆರಳ್ ಗೆ ಕೊರಳ್, ಏಕಲವ್ಯ, ಒಂದು ತೌಲನಿಕ ನೋಟ, ಪ್ರೊ.ಕೆ.ಭೈರಪ್ಪ ಮತ್ತು ಪ್ರೊ. ಅರವಿಂದ ಮಾಲಗತ್ತಿ (ಸಂ) ಕುವೆಂಪು: ಪುನರ್ಮನನ, ಮೈ.ವಿ.ವಿ ಪ್ರಸಾರಂಗ, ಪುಟ:158.

15. ಲೇ. ಡಾ. ರಾಗೌ, ಬೆರಳ್ ಗೆ ಕೊರಳ್ ಮತ್ತು ಸಂಕೇತಿಕತೆ, ಎಸ್.ಚನ್ನಪ್ಪ (ಸಂ) ಕುವೆಂಪು ಸಾಹಿತ್ಯ ಸಮಾಲೋಚನೆ, 2008, ಪುಟ: 64.
16. ಡಾ. ಸಾ.ಶಿ. ಮರುಳಯ್ಯ, ಕುವೆಂಪು ಸ್ವಪ್ನ ಲೋಕ, ಪ್ರಕಾಶಕರು ಸ್ವಪ್ನ, 2013, ಪುಟ:106.
17. ಡಿ.ಆರ್. ನಾಗರಾಜ್, ಅಮೃತ ಮತ್ತು ಗರುಡ, ಅಕ್ಷರ ಪ್ರಕಾಶನ, 2003, ಪುಟ: 32.
18. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಅಭಿನವ ಪ್ರಕಾಶನ 2012, ಪುಟ: 172
19. ಸುಜನಾ, ಪರಂಪರೆ ಮತ್ತು ಕುವೆಂಪು, ಸಹ್ಯಾದ್ರಿ ಪ್ರಕಾಶನ, ಮೈಸೂರು, 1984, ಪುಟ: 64.
20. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಚಿದಂಬರ ರಹಸ್ಯ, ಪುಟ: 65
21. ಅದೇ; ಪುಟ: 134
22. ಅದೇ: ಪುಟ: 134
23. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಅಭಿನವ ಪ್ರಕಾಶನ 2012, ಪುಟ: 160
24. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಮಾಯಾಲೋಕ-1, ಪುಟ: 61
25. ಕುವೆಂಪು, ಕುವೆಂಪು ಸಮಗ್ರ ಗದ್ಯ, ಸಂಪುಟ 2, ಪುಟ: 1212.
26. ಅದೇ;
27. ಅಕ್ಷತಾ ಕೆ. ಮತ್ತು ಕಡಿದಾಳು ಶಾಮಣ್ಣ, ಕಾಡುತೊರೆಯ ಜಾಡು, ಅಭಿನವ ಪ್ರಕಾಶನ, 2011, ಪುಟ: 35.
28. ಅದೇ; ಪುಟ: 41.
29. ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಿಜವಾದ ಜಾತ್ಯಾತೀತರಿಗೆ -ಮೀಸಲಾತಿ ಎಲ್ಲಿ? 16 ಡಿಸೆಂಬರ್, 1990, ಲಂಕೇಶ್ ಪತ್ರಿಕೆ.